

# ಬಾವಲಿಯ ಕಣ್ಣಲ್ಲಿ ಮಾತೃಲೋಕ

ಕಾಲೇಜ್ ಕ್ಯಾಂಪಸ್‌ನಲ್ಲಿ ಗಾಯಗೊಂಡು ಬಿದ್ದ ಬಾವಲಿಯ ಹೊಟ್ಟೆಯ ಭಾಗದಲ್ಲಿ ಮರಿಯೊಂದು ಬೆಚ್ಚಗೆ ಕಚ್ಚಿಕೊಂಡಿತ್ತು! ಗಾಯಗೊಂಡ ನಿಶಾಚರಿ ಜೀವ ಸುರಕ್ಷಿತ ಸ್ಥಳ ಸೇರಿದ ಈ ಕಥನ, ಭೂಮಿಯ ಜೀವಿವ್ಯವಸ್ಥೆಯ ಬಹುಮುಖ್ಯ ಕೊಂಡಿಯೊಂದರ ಕುರಿತ 'ಬಾವಲಿ ನೋಟ'ವನ್ನು ಸಹೃದಯರಿಗೆ ಕಾಣಿಸುತ್ತಿದೆ.

■ ಗುರುರಾಜ್ ಎಸ್. ದಾವಣಗೆರೆ

ಮುಂಜಾನೆ ಹತ್ತರ ಹೊತ್ತಿಗೆ ಕಾಲೇಜು ಹಾಸ್ಟೆಲ್ ವಿಸಿಟ್ ಮುಗಿಸಿ, ಬಾಳೆಗಿಡಗಳಲ್ಲಿ ಕೊಯಿಲಿಗೆ ಬಂದಿದ್ದ ಗೊನೆಗಳನ್ನು ಬಿಡಿಸುವ ಬಗ್ಗೆ ಅಟೆಂಡರ್ ನಂಜಪ್ಪನಿಗೆ ಹೇಳುತ್ತಿದ್ದೆ. ಅಷ್ಟರಲ್ಲಿ ಪಿಚಕಾರಿ (ಸ್ಪ್ಯಾಥೋಡಿಯ ಕಂಪಾನುಲೇಟಾ) ಮರದ ಪಕ್ಕದಲ್ಲಿ ಗಾರ್ಡನರ್ ಮೂರ್ತಿ ಮತ್ತು ಹೆಲ್ಪರ್ ಶೋಭಮ್ಮ ಇಬ್ಬರೂ ಯಾವುದೋ ಹಕ್ಕಿಯ ಬಗ್ಗೆ ಮಾತನಾಡುತ್ತಿದ್ದುದು ಕಿವಿಗೆ ಬಿತ್ತು. ಹತ್ತು ಮೀಟರ್ ದೂರದಲ್ಲಿದ್ದ ಅವರ ಹತ್ತಿರ ಬರುತ್ತಿದ್ದಂತೆ 'ಭೂತ ಕಣಪ್ಪ ಅದು, ಅದನ್ಯಾಕ್ ಹತ್ರ ಸೇರುಸ್ತೀಯ, ಬುಟ್ಬುಡು' ಅಂದಿದ್ದು ಕೇಳಿಸಿತು.

'ನಾನೇನು ಅದನ್ನ ಉಡಕ್ಕಂಡ್ ಹೋಗಿದ್ನ, ಅದೇ ಬಂದು ಸಿಗಾಕ್ಕಂಡದೆ, ಗಾಯ ಆಗದೆ, ಮ್ಯಾಲಿಂದ ಬಿದ್ದಿರಬೇಕು, ಸೈಡಿಗಾಕ್ತೀನಿ ಇರು' ಎಂದು ನೆಲದ ಮೇಲೆ ತೆವಳುತ್ತಾ, ಹಾರಲು ಪ್ರಯತ್ನಿಸುತ್ತಿದ್ದ ಜೀವಿಯೊಂದನ್ನು ಕಡ್ಡಿಯ ಸಹಾಯದಿಂದ ಮೇಲಕ್ಕೆತ್ತಲು ಸಾಹಸಪಡುತ್ತಿದ್ದ. 'ಇರಪ್ಪಾ ನಾನೂ ಬಂದೆ, ಏನು ಅಂತ ನೋಡ್ತೀನಿ' ಎಂದು ಹತ್ತಿರ ಹೋದೆ.

ಗಾಯಗೊಂಡು ನೆಲಕ್ಕೊರಗಿದ್ದ ಬಾವಲಿಯನ್ನೇ ಅವರಿಬ್ಬರು 'ಭೂತ' ಎಂದು ಕರೆದು, ದಾರಿಯ ಬದಿಯಿಂದ ಮರವೊಂದಕ್ಕೆ ವರ್ಗಾಯಿಸುವ ಸಾಹಸದಲ್ಲಿದ್ದರು. 'ಇದು ಬಾವಲಿ ಅಲ್ವಾ? ಅದನ್ಯಾಕೆ ಬೂತ ಅಂತೀರಾ' ಎಂದದ್ದಕ್ಕೆ, 'ನಾನಲ್ಲ ಸರ್, ಈವಮ್ಮನೆ ಅದು ಭೂತ, ಅಪಸಕುನಾ ಅದೂ ಇದೂ ಅಂತ ರೋದ್ನೆ ಮಾಡ್ತವ್ಳೆ' ಅಂದ. 'ಹೌದೇನಮ್ಮ, ಎಲ್ಲಿ ನೋಡೋಣ' ಅಂತ ಹತ್ತಿರದಿಂದ ನೋಡಿದೆ. ಅಷ್ಟರಲ್ಲಿ 'ನೀವ್ಯಾಕ ಅತ್ರ ಹೋಕ್ತೀರಾ ಸಾರ್, ಅದ್ರಿಂದ ಕಾಯಿಲೆ ಬತ್ತವೆ, ದೂರ ಬಂದುಬಿಡಿ' ಅಂದ ಶೋಭಮ್ಮ– 'ಅದೆಲ್ಲಿತ್ತೋ ಇಲ್ ಬಂದ್ ಬಿದ್ದದೆ, ಕಾಗೇನೋ ಹದ್ದೋ ಹೊಡದಂಗದೆ, ಅದಕ್ಕೇ ರಕ್ತ ಅಂಟಗಂಡದೆ... ಏ ಮೂರ್ತಿ, ಬ್ಯಾಗ ಅದಕ್ಕೊಂದು ಜಾಗ ಮಾಡು' ಎಂದು ಮೂರ್ತಿಯನ್ನು ಗದರಿದಳು.

'ಇರು ಶೋಭಮ್ಮ, ಏನಾಗಿದೆ ಅಂತ ನೋಡೋಣ' ಎಂದು ಒಂದು ದಪ್ಪ ಕಟ್ಟಿಗೆಯ ತುಂಡಿಗಾಗಿ ಹುಡುಕಾಡಿದೆ. ಹತ್ತಿರದಲ್ಲೇ ಬಿದ್ದಿದ್ದ ಒಣಗಿದ ಮರದ ತುಂಡನ್ನು ನೀಡಿದ ಮೂರ್ತಿ, 'ಸರ್, ನಿಮಗೇನಾದರೂ ಇದು ಬೇಕಾ, ಕಾಲೇಜ್ನಾಗ್ ಹುಡುಗ್ರಿಗೆ ತೋರುಸ್ತೀರಾ' ಅಂದ. ಮೂರ್ತಿಯ ಕೈಯಲ್ಲಿದ್ದ ಕಟ್ಟಿಗೆಯ ತುಂಡನ್ನು ಇಸಿದುಕೊಂಡು ಬಾವಲಿಯ ಆಸರೆಗೆ ನಿಂತೆ.

### ಮಿಡಿದ ತಾಯಿ ಹೃದಯ

ಕಣ್ಣು ಮುಚ್ಚಿಕೊಂಡೇ ಇದ್ದ ಬಾವಲಿ ಹಾರುವ ಸ್ಥಿತಿಯಲ್ಲಿರಲಿಲ್ಲ. ಅದರ ರೆಕ್ಕೆಗೆ ರಕ್ತದ ಹನಿಗಳು ಅಂಟಿಕೊಂಡಿದ್ದವು. ಕೈಯಲ್ಲಿದ್ದ ಕಟ್ಟಿಗೆಯನ್ನು ಮುಂದೆ ಮಾಡಿದ ತಕ್ಷಣ ತನ್ನ ಒಂದು